ಪ್ರಶ್ನೋತ್ತರಗಳು

2. ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಡೀಮ್ಡ್ ಫಾರೆಸ್ಟ್ ಪರಿಶೀಲಿಸಲು ರಚಿಸಿರುವ ಸಮಿತಿ

62 (758); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಡೀಮ್ಡ್ ಫಾರೆಸ್ಟ್‌ನ್ನು ಪರಿಶೀಲನೆ ಮಾಡಲು ರಚಿಸಿದ ಸಮಿತಿಯು ಯಾವ ಯಾವ ತಾಲ್ಲೂಕುಗಳಲ್ಲಿ ಕೆಲಸವನ್ನು ಪ್ರಾರಂಭಿಸಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ಕೆಲಸವನ್ನು ಪೂರ್ಣಗೊಳಿಸಿದೆ; (ವಿವರ ನೀಡುವುದು)

ಆ) ವರದಿಯ ಮೇಲೆ ಯಾವ ಯಾವ ತಾಲ್ಲೂಕುಗಳಲ್ಲಿ ಡೀಮ್ಡ್ ಫಾರೆಸ್ಟ್ ಜಮೀನುಗಳಲ್ಲಿ ಕಾಡು ಇಲ್ಲದಿರುವ ಬಗ್ಗೆ ವರದಿಯಾಗಿದೆ? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ: ಅಪಜೀ 185 ಎಫ್‌ಎಎಫ್ 2012, ದಿನಾಂಕ: 15.05.2014 ರಂತೆ ಡೀಮ್ಡ್ ಫಾರೆಸ್ಟ್‌ನ್ನು ಪರಿಶೀಲನೆ ಮಾಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಇವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿರುತ್ತದೆ. ಜಿಲ್ಲಾ ಮಟ್ಟದ ಸಮಿತಿಗಳು ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳ ತಾಲ್ಲೂಕುಗಳಲ್ಲಿನ ಗ್ರಾಮವಾರು ಹಾಗೂ ಸರ್ವೆ ನಂಬರ್‌ವಾರು ಮೇಲ್ಕಂಡ ಆದೇಶಾನುಸಾರ ಡೀಮ್ಡ್ ಫಾರೆಸ್ಟ್

ಜಮೀನುಗಳ ಪರಿಶೀಲನೆ ಮತ್ತು ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಬೇಕಾಗಿದ್ದು ಇದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಪ್ರಾರಂಭವಾಗಿರುತ್ತದೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆ, ಯಾದಗಿರಿ ಜಿಲ್ಲೆ ಮತ್ತು ಕಲ್ಬುರ್ಗಿ ಜಿಲ್ಲೆಗಳಿಂದ ವರದಿ ಬಂದಿದ್ದು ಈ ವರದಿಯನ್ನು ರಾಜ್ಯ ಮಟ್ಟದ ಸಮಿತಿಯಲ್ಲಿ ಇನ್ನು ಪರಿಶೀಲಿಸಬೇಕಾಗಿದೆ. ಈ ಸಂಬಂಧವಾಗಿ ದಿನಾಂಕ: 19.11.2014 ರಂದು ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ನಡೆಸಿದ ವಿಡಿಯೋ ಸಂವಾದದಲ್ಲಿ ಈಗಾಗಲೇ ನಿಗಧಿತ ಅವಧಿ ಮುಗಿದಿರುವುದರಿಂದ ಆದಷ್ಟು ಜಾಗ್ರತೆ ವರದಿಗಳನ್ನು ಸಲ್ಲಿಸಲು ಎಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಲಾಯಿತು. ಹೆಚ್ಚಿನ ಸಂಖ್ಯೆಯ ಜಿಲ್ಲಾಧಿಕಾರಿಗಳು ಕ್ಷೇತ್ರ ಮಟ್ಟದ ಪರಿಶೀಲನೆ ಕೈಗೊಳ್ಳಲು ಕಾಲಾವಕಾಶ " ಕೋರಿದ ಮೇರೆಗೆ ದಿನಾಂಕ: 30.01.2015 ರಂದು ಆದೇಶ ಹೊರಡಿಸಿ ಎಲ್ಲಾ ಜಿಲ್ಲಾಧಿಕಾರಿಗಳು ದಿನಾಂಕ: 31.03.2015 ರ ಒಳಗಾಗಿ ಪ್ರಾದೇಶಿಕ ಆಯುಕ್ತರ ಮೂಲಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರಿಗೆ ಜಿಲ್ಲಾ ಮಟ್ಟದ ಸಮಿತಿಯ ವರದಿಗಳನ್ನು ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. ಎಲ್ಲಾ ಜಿಲ್ಲೆಗಳಿಂದ ವರದಿಗಳು ಬಂದ ನಂತರ ಯಾವ ಯಾವ ಜಿಲ್ಲೆ/ತಾಲ್ಲೂಕ್‌ಗಳಲ್ಲಿ ಡೀಮ್ಡ್ ಫಾರೆಸ್ಟ್ ಜಮೀನುಗಳಲ್ಲಿ ಕಾಡು ಇಲ್ಲದಿರುವ ಮಾಹಿತಿ ಲಭ್ಯವಾಗುತ್ತದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೆ, ಅರಣ್ಯ ಜಮೀನನ್ನು ವಿಚಾರಣೆ ಮಾಡುವುದಕ್ಕೋಸ್ಕರ ರಾಜ್ಯಮಟ್ಟದ ಒಂದು ಸಮಿತಿಯನ್ನು ರಚನೆ ಮಾಡಿ ದಿನಾಂಕ: 15.05.2014 ರಂದು ಒಂದು ಆದೇಶ ಹೊರಡಿಸಿದೆ. ಆದೇಶ ಹೊರಡಿಸಿ ಸುಮಾರು 8 ತಿಂಗಳಾಗಿದೆ. ಕಳೆದ

8 ತಿಂಗಳಿನಿಂದ ಕೇವಲ 3 ಜಿಲ್ಲೆಗಳನ್ನು ಹೊರತುಪಡಿಸಿದರೆ ಯಾವುದೇ ಜಿಲ್ಲಾಧಿಕಾರಿಗಳು ಇಲ್ಲಿಯವರೆಗೂ ...

ಅಧ್ಯಕ್ಷರು:– ಅದಕ್ಕೇ ಈಗ ವಿಸ್ತರಣೆ ಮಾಡಿದ್ದಾರೆ.

ಶ್ರೀ ಯು.ಬಿ. ಬಣಕಾರ್:– ವಿಸ್ತರಣೆ ಮಾಡಿದ್ದಾರೆ. ಕೇವಲ 15 ದಿವಸಗಳಲ್ಲಿಯೇ ಮುಗಿಸಬಹುದಾದಂಥ ಈ ಸಮಿತಿ ಕೆಲಸವನ್ನು ಅನವಶ್ಯಕವಾಗಿ ವರ್ಷಗಟ್ಟಲೆ ಜರುಗಿಸುತ್ತಿದ್ದಾರೆ. ಹಾಗೆಯೇ, ಅರಣ್ಯ ಜಮೀನಿನಲ್ಲಿ ಸಾಕಷ್ಟು ಜನ ಸಾಗುವಳಿ ಮಾಡಿಲ್ಲ ಮತ್ತು ಬೇರೆ ಬೇರೆ ಕ್ಷೇತ್ರಗಳಿಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದನ್ನು ಉಳಿಸಿಕೊಳ್ಳಲಿಕ್ಕೆ ಇದೊಂದು ದೊಡ್ಡ ಅವಕಾಶ. ಯಾವುದೆಂದರೆ ಅರಣ್ಯವನ್ನು ಕಡಿಮೆ ಮಾಡುವುದು. ಆದ್ದರಿಂದ ಇದನ್ನು ಏಕೆ ವಿಳಂಬ ಮಾಡುತ್ತಿದ್ದಾರೆ? ಬೇರೆ ಕೆಲಸವನ್ನು ಅತ್ಯಂತ fast ಆಗಿ ಮಾಡುತ್ತಾರೆ. ಆದರೆ, ಈ ಕೆಲಸವನ್ನು ಅಧಿಕಾರಿಗಳು ಏಕೆ ವಿಳಂಬ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:– ವಿಳಂಬ ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ. O.k.

ಶ್ರೀ ಯು.ಬಿ. ಬಣಕಾರ್:– ವಿಳಂಬ ಮಾಡುತ್ತಿದ್ದಾರೆ. ಕೇವಲ 15 ದಿವಸಗಳಲ್ಲಿ ಒಂದು ತಾಲ್ಲೂಕಿನಲ್ಲಿ ಈ ಕೆಲಸವನ್ನು ಮುಗಿಸಬಹುದು. ನನ್ನ ತಾಲ್ಲೂಕಿನಲ್ಲಿ ಮುಗಿಸಿ 2 ತಿಂಗಳು ಆಗಿದೆ.

ಅಧ್ಯಕ್ಷರು:– ಆಯಿತು, ಏನು ಆಗಬೇಕು ಅದನ್ನು ಹೇಳಿ. ಅಧಿಕಾರಿಗಳು ಸರಿಯಾಗಿ ಮಾಡುತ್ತಿಲ್ಲ ಎಂದು ಹೇಳುತ್ತಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಶ್ನೆ ಕೇಳಿಬಿಡುತ್ತೇನೆ.

ಅಧ್ಯಕ್ಷರು:– ಒಂದು ನಿಮಿಷ ಮಂತ್ರಿಯವರೆ, ಅವರೂ ಕೇಳಿಬಿಡುತ್ತಾರಂತೆ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟುಬಿಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ:– ಅದಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿಬಿಡುತ್ತೇನೆ. ಒಟ್ಟಿಗೆ ಉತ್ತರ ಕೊಟ್ಟುಬಿಡಿ.

ಶ್ರೀ ಬಿ. ರಮಾನಾಥ ರೈ:– ಮೂಲ ಪ್ರಶ್ನೆ ಕೇಳಿದವರಿಗೆ ಉತ್ತರ ಕೊಟ್ಟುಬಿಡುತ್ತೇನೆ.

ಅಧ್ಯಕ್ಷರು:– ಬೋಪಯ್ಯನವರೆ, ಮೂಲ ಪ್ರಶ್ನೆ ಕೇಳಿದವರಿಗೆ ಉತ್ತರ ಕೊಟ್ಟುಬಿಡುತ್ತೇನೆಂದು ಮಂತ್ರಿಯವರು ಹೇಳುತ್ತಿದ್ದಾರೆ. ಆಮೇಲೆ ನಿಮಗೆ ಉತ್ತರ ಕೊಡುತ್ತಾರೆ. ಏಕೆ ಗಡಿಬಿಡಿ ಮಾಡುತ್ತೀರಿ? ಎಲ್ಲೋ ಓಡಿಹೋಗುತ್ತಾರೆಯೇ?

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಸಭಾಧ್ಯಕ್ಷರೆ, Deemed Forest ಬಗ್ಗೆ ಸಮಸ್ಯೆ ಕೆಲವಾರು ವರ್ಷಗಳಿಂದ ಉಳಿದುಕೊಂಡು ಬಂದಿರತಕ್ಕಂಥದ್ದು. ಎಷ್ಟು forest ಜಾಗ ಇದೆ ಎನ್ನತಕ್ಕಂಥದ್ದನ್ನು 97ನೇ ಇಸವಿಯಲ್ಲಿ ಕೊಟ್ಟನಂತರ, ಒಂದು ವರ್ಷದ ಒಳಗೆ ವರದಿ ಮಾಡಿ ಕೊಡಬೇಕೆಂದು Supreme Court ಆದೇಶ ಬಂದ ನಂತರ ಕೂಡ ವಿವರವಾದಂಥ ವರದಿಯನ್ನು ಇಲ್ಲಿಯವರೆಗೆ ಕೊಟ್ಟಿಲ್ಲ. ಅದನ್ನು ಮನಗಂಡಂಥ ನಾವು ಜಂಟಿ survey ಮಾಡಿಸಿ ಎಲ್ಲೆಲ್ಲಿ ವಿಹಿತ ಮಾಡಲಿಕ್ಕೆ ಸಾಧ್ಯತೆ ಇದೆ, ಸ್ವಾಭಾವಿಕವಾಗಿ ಅರಣ್ಯ ಇಲ್ಲದಂಥ ಪ್ರದೇಶದಲ್ಲಿ ಮನೆ ಕಟ್ಟಿರತಕ್ಕಂಥದ್ದು ಇರಬಹುದು, ಖಾಲಿ ಜಾಗ ಇರಬಹುದು ಅದನ್ನು ಹೊರತುಪಡಿಸಿ forest ಇರತಕ್ಕಂಥ, nature ಇರತಕ್ಕಂಥದ್ದನ್ನು ಉಳಿಸಿಕೊಳ್ಳಬೇಕೆನ್ನುವ ಉದ್ದೇಶದಿಂದ ನಾವು ಇದಕ್ಕೆ ಸಾಕಷ್ಟು ಆಲೋಚನೆ ಮಾಡಿ ಸಮಿತಿಯನ್ನು ರಚನೆ ಮಾಡಿ 6 ತಿಂಗಳೊಳಗೆ ವರದಿಯನ್ನು ಕೊಡುತ್ತೇವೆಂದು cabinet ನಲ್ಲಿ ಒಪ್ಪಿಕೊಂಡಿದ್ದು ಹೌದು. ಆದರೆ, ಅದನ್ನು ಮತ್ತೆ 6 ತಿಂಗಳು ವಿಸ್ತರಣೆ ಮಾಡಿದ್ದೇವೆ. ನೀವು ತಿಳಿದುಕೊಳ್ಳಬೇಕು. 1997ರಿಂದ ಒಂದು ವರ್ಷದಲ್ಲಿ ಕೊಡಬೇಕೆಂದರೂ ಒಂದು ವರ್ಷದಲ್ಲಿ ಕೊಟ್ಟಿಲ್ಲ. ಇದು ಹಳೆಯ ವಿಷಯವಲ್ಲ . . . .

ಅಧ್ಯಕ್ಷರು:– ಯುಗ ಯುಗದಲ್ಲಿ ಅವತಾರ ಪುರುಷರು ಹುಟ್ಟಿ ಬರುತ್ತಿರುತ್ತಾರೆ. ಈಗ ಆಗದಿದ್ದರೆ ಈಗ ಅವತಾರ ಪರುಷರಿಗಾಗಿ ಬಂದಿದ್ದೀರಿ ಈಗ ಮಾಡಿ ಅಷ್ಟೇ.

ಶ್ರೀ ಬಿ. ರಮಾನಾಥ ರೈ:– ಮಾಡಬೇಕು ಎಂದೇ ಹೊರಟಿದ್ದು ಸಾರ್. ಏಕೆಂದರೆ, ಜಂಟಿ ಸರ್ವೆ ಯಾವಾಗಲೋ ಆಗಬೇಕಾಗಿತ್ತು.

ಅಧ್ಯಕ್ಷರು:– ಆಯಿತು.

ಶ್ರೀ ಬಿ. ರಮಾನಾಥ ರೈ:– ನಮ್ಮ ಕಾಲದಲ್ಲಿ ಆಗಬೇಕೆಂಬ ತೀರ್ಮಾನ ಇದ್ದು, 6 ತಿಂಗಳಲ್ಲಿ ಎಲ್ಲವನ್ನೂ, ಇವತ್ತು ನೀವು ಏನೇನು ಅಪೇಕ್ಷೆಪಟ್ಟುಕೊಳ್ಳುತ್ತೀರಿ, ಸಾಕಷ್ಟು ಭೂಮಿ, ರೈತರಿಗೆ ತೊಂದರೆಯಾಗುವುದನ್ನು ಸರಿಪಡಿಸುವುದಾಗುತ್ತದೆ. ಕಂದಾಯ ಮತ್ತು ಅರಣ್ಯ ಇಲಾಖೆಯವರು ಜಂಟಿ ಸರ್ವೆಯನ್ನು ಶುರು ಮಾಡಿದ್ದಾರೆ. ಕೆಲವು ಕಡೆ ಪ್ರಗತಿ ಪರಿಣಾಮಕಾರಿಯಾಗಿದೆ. ಕೆಲವು ಕಡೆ ನಿಧಾನವಾಗಿರಬಹುದು. ಇಲ್ಲವೆಂದು ಹೇಳತಕ್ಕದ್ದಲ್ಲ. ಅದನ್ನು ನಾವು ನಿಗದಿತ ಅವಧಿ ಏನು ಕೇಳಿದ್ದೇವೆ, ಆ ಸಮಯದಲ್ಲಿ ಮಾಡುತ್ತೇವೆ.. . . .

ಶ್ರೀ ಕೆ.ಜಿ. ಬೋಪಯ್ಯ:– ಇವರು deemed forest ಎಂದು ಹೇಳುತ್ತಾರೆ. Deemed forest purview ಏನು? ಅದರ definition ನಲ್ಲಿ ಯಾವುದೆಲ್ಲ ಬರುತ್ತದೆ? ಅದನ್ನೂ ಸ್ವಲ್ಪ ಇವರು ಹೇಳಬೇಕು. ಹಿಂದೆ ಒಂದು ಸಲ . . . .

ಅಧ್ಯಕ್ಷರು:– ಅದಕ್ಕೆ separate ಪ್ರಶ್ನೆ ಕೇಳಿ.

ಶ್ರೀ ಕೆ.ಜಿ. ಬೋಪಯ್ಯ:– Deemed forest ಅವರಿಗೆ ಗೊತ್ತಿರುತ್ತದೆ.

(ಗೊಂದಲ)

ಅಧ್ಯಕ್ಷರು:– ಅಲ್ಲ, ಒಂದು ನಿಮಿಷ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ತಾವು ಸರ್ಕಾರದಲ್ಲಿದ್ದವರು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಸರ್ಕಾರದಲ್ಲಿದ್ದವರೇ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– Deemed forest ಎಂದು ನಾವು ಇವತ್ತು ಹೊಸದಾಗಿ ಶುರು ಮಾಡಿದ್ದಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಹೊಸದಾಗಿ ನಾವು ಇದರ ವ್ಯಾಖ್ಯಾನ ಶುರು ಮಾಡಿದ್ದಲ್ಲ.

ಅಧ್ಯಕ್ಷರು:– ಬೋಪಯ್ಯನವರೆ, ಸ್ವಲ್ಪ ತಾಳಿ.

ಶ್ರೀ ಬಿ. ರಮಾನಾಥ ರೈ:– ಇದನ್ನು ಮತ್ತೆ ಮತ್ತೆ ಏಕೆ ಹೇಳಿಕೊಂಡು ಸದನದಲ್ಲಿ ಮಾತನಾಡಿದೆವು ಎಂದು ಹೇಳತಕ್ಕಂಥದ್ದು. . . .

(ಗೊಂದಲ)

ಅಧ್ಯಕ್ಷರು:– ಆಯಿತು, ತಾಳಿ, ಮಾರಾಯರೆ.

ಶ್ರೀ ಬಿ. ರಮಾನಾಥ ರೈ:– ಪ್ರತ್ಯೇಕವಾದ ಪ್ರಶ್ನೆ ಕೇಳಿ, ಹೇಳುತ್ತೇನೆ.

ಅಧ್ಯಕ್ಷರು:– ಈಗ deemed forest ಯಾವುವು ಎಂದು ಪ್ರತ್ಯೇಕ ಪ್ರಶ್ನೆ ಕೇಳಿ. ಏಕೆಂದರೆ, ಸರ್ಕಾರದವರು ಉತ್ತರ ಕೊಡುವಾಗ ಸ್ಪಷ್ಟವಾಗಿ ಕೊಡಬೇಕಾಗುತ್ತದೆ. ನೀವು adhoc ಆಗಿ ಕೇಳಿಬಿಡುವುದು, ಕಡೆಗೆ ಅವರೂ adhoc ಆಗಿ ಉತ್ತರ ಕೊಡುವುದು ಸರಿ ಆಗುವುದಿಲ್ಲ. ಬೇಡಿ. ನಾನು ಮೊನ್ನೆ ಕೇಳಿದೆ.

ಶ್ರೀ ಕೆ.ಜಿ. ಬೋಪಯ್ಯ:– ಅವರ ಉತ್ತರದಲ್ಲಿ deemed forest ಎಂದರೆ, ಕಾಣೆ, ಬಾಣೆ, ಆಮೇಲೆ, Government C & D lands ಇದೆಲ್ಲ ಹೇಳಿಕೊಂಡೆ ಬಂದಿದ್ದಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಈಗ ಗೌರವಾನ್ವಿತ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಎಲ್ಲಿ forest nature ಇಲ್ಲದಂಥ ಪ್ರದೇಶವನ್ನು ಬಿಟ್ಟುಬಿಡುತ್ತೇವೆ ಎಂದು ಹೇಳತಕ್ಕಂಥ ದೃಷ್ಟಿಯಿಂದ ಸರ್ವೆ ಆಗುತ್ತಿದೆ. ಇದನ್ನು appreciate ಮಾಡಬೇಕು.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– C & D land ನಲ್ಲಿ cultivation ಇದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಸುಮ್ಮನೆ deemed forest ಏನು? ಅದು ಏನು, ಇದು ಏನು.. . . .

(ಗೊಂದಲ)

ಅಧ್ಯಕ್ಷರು:– ಬೋಪಯ್ಯನವರೆ, ನೀವು ಸುಮ್ಮನೆ ಕಾಲ ವ್ಯರ್ಥ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು:– ನೀವು ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿ. ಒಳ್ಳೆಯದಾಗುತ್ತದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಉದ್ದೇಶವೇನು? ಏಕೆ ಒಂದು ವರ್ಷದಲ್ಲಿ ಸರ್ವೆ ಮಾಡಿಸಿ . .

(ಗೊಂದಲ)

ಶ್ರೀ ಸಿ.ಟಿ. ರವಿ:– ಅದು deemed forest ಸೇರಿಸಿ survey ಆಗಿತ್ತೇ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– Supreme Court ಕೂಡ. . . .

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಅದನ್ನು ನಾವು ಮಾಡಿಕೊಂಡು ಸಾಕಷ್ಟು ಜಮೀನನ್ನು . . . .

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– . . . . ಪ್ರಕಾರ ಆದೇಶವಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಈ deemed forest ಎನ್ನುವುದು ಕಳೆದ 8–10 ವರ್ಷಗಳಿಂದಲೂ. . . .

(ಗೊಂದಲ)

ಅಧ್ಯಕ್ಷರು:– ನೀವೂ ನಿಂತುಕೊಳ್ಳುವುದು, ಅವರೂ ನಿಂತುಕೊಳ್ಳುವುದು, ಎಂಥದ್ದು ಇದು?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಹತ್ತಾರು ವರ್ಷಗಳಿಂದಲೂ deemed forest ಎಂದು ಹೇಳಿ Supreme Court ಕೊಟ್ಟಿರತಕ್ಕಂಥ definiton ನಲ್ಲಿ ಇದೆ. ಆದರೆ, ಇಲ್ಲಿಯವರೆಗೆ ಅದು ವ್ಯಾಖ್ಯಾನ ಸರಿ ಇದೆಯೋ, ಇಲ್ಲವೋ ಎನ್ನುವುದರ ಬಗ್ಗೆ ಯಾವುದೇ ತೀರ್ಮಾನ ಮಾಡಿರಲಿಲ್ಲ. ನಾವು

ಬಂದಮೇಲೆ ಸಚಿವಸಂಪುಟದ ಉಪ ಸಮಿತಿ ಮಾಡಿ ಅದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡು ಈಗ ಅಂತಿಮವಾಗಿ 3 ಜಿಲ್ಲೆ ಎಂದು ಹೇಳಿದಿರಿ, ಎಲ್ಲಾ ಜಿಲ್ಲೆಗಳಲ್ಲೂ ಕೂಡ ಪ್ರಾರಂಭವಾಗಿದೆ. ಅದಕ್ಕೆ ಇತಿಶ್ರೀ ಹಾಡತಕ್ಕಂಥವರು ನಾವೇ. ಆದರೆ, ನೀವು ಇದ್ದಂಥ ಸಂದರ್ಭದಲ್ಲಿ ಯಾವ ಪ್ರಯತ್ನಗಳೂ ಕೂಡ ನಡೆಯಲಿಲ್ಲ ಎನ್ನತಕ್ಕಂಥದ್ದನ್ನೂ ಮರೆಯಬೇಡಿ.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ತೊಂದರೆಗಳು ಶುರುವಾಗಿದ್ದೇ ನಿಮ್ಮ ಕಾಲದಲ್ಲಿ

(ಗೊಂದಲ)

ಅಧ್ಯಕ್ಷರು:– ಬೋಪಯ್ಯನವರೆ, ಸುಮ್ಮನಿರಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಖಾಲಿ ಮಾಡಿಸುವುದನ್ನು ಶುರು ಮಾಡಿದ್ದೇ ನೀವು. . . .

(ಗೊಂದಲ)

ಅಧ್ಯಕ್ಷರು:– ಬೋಪಯ್ಯನವರೆ, ಆ ಭಾಷೆ ಬಳಸಬೇಡಿ. ತಪ್ಪು ಎಲ್ಲರಿಂದಲೂ ಆಗಿದೆ. ಗೊತ್ತೇ? ಬಿಟ್ಟುಬಿಡಿ. ನಮ್ಮಿಂದಲೂ ಆಗಿದೆ. ನಿಮ್ಮಿಂದ. . . . .

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಅವರು ಎಲ್ಲವೂ ನಿಮ್ಮ ಕಾಲದಲ್ಲಿ ಎಂದುಬಿಟ್ಟರೆ?

(ಗೊಂದಲ)

ಅಧ್ಯಕ್ಷರು:– ಈಗ ಸರಿಪಡಿಸುವುದಕ್ಕೆ ಒಂದು ಮಾರ್ಗ ಕಂಡುಹಿಡಿದಿದ್ದಾರೆ. ಬಿಟ್ಟುಬಿಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– Deemed forest ಯಾವಾಗಿನಿಂದ ಪ್ರಾರಂಭವಾಯಿತು?

(ಗೊಂದಲ)

ಅಧ್ಯಕ್ಷರು:– ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡುತ್ತಾ ಕುಳಿತುಕೊಳ್ಳಲು ಸಮಯ ಎಲ್ಲಿದೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಹೌದು ಯಾವಾಗ ಪ್ರಾರಂಭವಾಗಿದೆ? ಕಳೆದ 10 ವರ್ಷಗಳಿಂದ . . . ಅದನ್ನೂ ಒಪ್ಪುತ್ತೇನೆ.

(ಗೊಂದಲ)

ಅಧ್ಯಕ್ಷರು:– ಪ್ರತ್ಯೇಕವಾಗಿ ಕೇಳಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಎಲ್ಲ ನಿಮ್ಮ ಕಾಲ ಎಂದು ಹೇಳಿ ಮಾಡಿದರೆ?

ಅಧ್ಯಕ್ಷರು:– ಬೋಪಯ್ಯನವರೆ, ...

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಮೊನ್ನೆ ಸಮಾಜ ಕಲ್ಯಾಣ ಸಚಿವರು ಬಂದು ಗಿರಿಜನ ಹಾಡಿಯಲ್ಲಿ ಉಳಿದುಕೊಂಡಿದ್ದರು.

ಅಧ್ಯಕ್ಷರು:– ಈಗ ಅದು ಏಕೆ?

ಶ್ರೀ ಕೆ.ಜಿ. ಬೋಪಯ್ಯ:– ನಿನ್ನೆ ಹೋದರೆ ಎಲ್ಲ notice?

ಅಧ್ಯಕ್ಷರು:– ಆಯಿತು, ಅದಕ್ಕೂ ಇದಕ್ಕೂ ಸಂಬಂಧವೇನು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಮ್ಮ ಜಿಲ್ಲೆಯ ವರದಿ ಬಂದಿದೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಇದು ಸರಿ ಮಾಡುವ ನೀತಿ ಅಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ನಾವು ಪದೇ ಹೇಳುತ್ತಿದ್ದೇವೆ. Land Revenue ., . . .

(ಗೊಂದಲ)

ಅಧ್ಯಕ್ಷರು:– ಈಗ ಸ್ವಲ್ಪ ತಾಳಿ. ಬೋಪಯ್ಯನವರೆ. . . .

ಶ್ರೀ ಟಿ.ಬಿ. ಜಯಚಂದ್ರ:– 2007ರಲ್ಲಿ Land Revenue Amendment ತಂದಿದ್ದು ನೀವೇ. Notice issue ಆಗುತ್ತಿರುವುದು ಅದರ ಪ್ರಕಾರವೇ.

ಅಧ್ಯಕ್ಷರು:– ಆಯಿತು, ಮಾನ್ಯ ಕಾನೂನು ಸಚಿವರೆ. . . .

(ಗೊಂದಲ)

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡಿ. ಮಂತ್ರಿಗಳೆ, ಈಗ ಒಂದು ಕೆಲಸ ಮಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಜಂಟಿ ಸರ್ವೆ ಮಾಡತಕ್ಕಂಥ ಪ್ರಕ್ರಿಯೆ ಶುರು ಮಾಡಿರತಕ್ಕಂಥದ್ದು . .

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಯಾವಾಗಲೋ ಶುರುವಾಗಬೇಕಾಗಿತ್ತು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಸಾಕಷ್ಟು ಸಮಸ್ಯೆಗಳನ್ನು ಪರಿಹಾರ . . . .

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ಹೇಳುವುದನ್ನಾದರೂ ಕೇಳಿ. ಪ್ರಶ್ನೆಯನ್ನೂ ಸರಿಯಾಗಿ ಕೇಳುವುದಿಲ್ಲ. ಇದುವರೆಗೆ ಆಗಲಿಲ್ಲವೆನ್ನುವ ಕಾರಣಕ್ಕಾಗಿ 31 ಮಾರ್ಚ್ ವರೆಗೆ ವಿಸ್ತಾರ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ವಿನಂತಿ ಏನು ಮಾಡುತ್ತೇನೆಂದರೆ, Field Committee ಎಂದು ಮಾಡಿದ್ದಾರೆ. ಪ್ರತಿ ತಾಲ್ಲೂಕಿಗೆ, rangeಗೆ ಒಂದೊಂದು Field Committee ಮಾಡಿದ್ದಾರೆ. ಅವರು ಪ್ರತಿ ಪಂಚಾಯಿತಿಗೆ ಭೇಟಿ ಕೊಟ್ಟು ಈ ವಿಚಾರವನ್ನು ತಿಳಿಸಿ ಅವರ ಜೊತೆಗೂ ಸಮಾಲೋಚನೆ ಮಾಡಿಕೊಂಡು ಬರುವುದಕ್ಕೆ ಒಂದು ಸೂಚನೆ ಸರ್ಕಾರದಿಂದ ಹೋಗಲಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಅದೇ ಹೇಳಿದ್ದು ಸಾರ್. ಪಂಚಾಯಿತಿಗೆ ಏನೂ ಮಾಹಿತಿ ಇರುವುದಿಲ್ಲ. ಅದೊಂದು ಮಾಹಿತಿ ಕೊಡಿ ಎಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವರದಿ ಬಂದಿದೆ. State Level Committee ಯವರು final ಮಾಡುತ್ತಿಲ್ಲ. ವಿಳಂಬ ಜಿಲ್ಲಾಧಿಕಾರಿಗಳ ಹಂತದಲ್ಲಿ ಜಿಲ್ಲಾಮಟ್ಟದಲ್ಲಾಗುತ್ತಿದೆ.

ಶ್ರೀ ಬಿ. ರಮಾನಾಥ ರೈ:– ಯಾವ ವಿಳಂಬವೂ ಆಗಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ರಾಜ್ಯ ಮಟ್ಟದಲ್ಲಿ ರಾಜ್ಯಮಟ್ಟದವರಿಂದ ವಿಳಂಬವಾಗುತ್ತಿದೆ. ವರದಿ ಬಂದವರದ್ದೂ ನಿರ್ಣಯ ಮಾಡುತ್ತಿಲ್ಲ.

ಅಧ್ಯಕ್ಷರು:– ಆಯಿತು. ಬಂದರೆ ಮಾಡಿ.

ಶ್ರೀ ಬಿ. ರಮಾನಾಥ ರೈ:– ಈಗ ಇದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇದೆ.

ಅಧ್ಯಕ್ಷರು:– ಹೌದು.

ಶ್ರೀ ಬಿ. ರಮಾನಾಥ ರೈ:– ನಾವು ಎರಡೂ ಜಂಟಿ ಸರ್ವೆ ಮಾಡತಕ್ಕಂಥ ಪ್ರಕ್ರಿಯೆಯನ್ನು ಶುರು ಮಾಡಿದ್ದೇವೆ. ನಾವು 6 ತಿಂಗಳು ಮತ್ತೆ ಕೇಳಿದ್ದೇವೆ. ನಾವು affidavit ಕೊಡುತ್ತೇವೆಂದು ಮಾತನ್ನು ಕೊಟ್ಟಿದ್ದೇವೆ. ಆ ತರಹ 6 ತಿಂಗಳಲ್ಲಿ ನಾವು ಇದನ್ನು ಮಾಡಿಕೊಂಡು ಜನರ ಬಳಿಗೆ ಹೋಗಿ ಸಮಸ್ಯೆಗಳನ್ನೂ ತಿಳಿದುಕೊಂಡು . . . .

ಅಧ್ಯಕ್ಷರು:– ನಾನು ಹೇಳಿದ್ದು ಇಷ್ಟೇ.

ಶ್ರೀ ಬಿ. ರಮಾನಾಥ ರೈ:– ಆಯಿತು, ಪಂಚಾಯಿತಿಗೆ ತಿಳಿಸುವುದು ಮಾಡುತ್ತೇವೆ.

ಅಧ್ಯಕ್ಷರು:– ಅವರು visit ಮಾಡುವುದಕ್ಕೆ ಒಂದು ಅವಕಾಶ ಕೊಟ್ಟುಬಿಡಿ.

ಶ್ರೀ ಬಿ. ರಮಾನಾಥ ರೈ:– Visit ಮಾಡತಕ್ಕಂಥ. . . local ಅಧಿಕಾರಿಗಳು ಮಾಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವರದಿ ಎಲ್ಲಿಂದ ಬಂದಿದೆ. . . .

ಅಧ್ಯಕ್ಷರು:– ಗಡಿಬಿಡಿ ಮಾಡಬೇಡಿ ಸುಮ್ಮನಿರಿ. ಮತ್ತೆ ಏನಾದರೂ ಮಾಡಿಬಿಟ್ಟಾರು, ಸುಮ್ಮನಿರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವರದಿ ಬಂದಿದೆ.

ಶ್ರೀ ಬಿ. ರಮಾನಾಥ ರೈ:– ಏನು ವರದಿ, ಮಾಹಿತಿ ಕೊಡಿ.